ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಮಾರುಕಟ್ಟೆ ಪ್ರಾಂಗಣಕ್ಕಾಗಿ 103.12 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದು ಇದರಲ್ಲಿ ವಿವಿಧ ಅಳತೆಯ 256 ನಿವೇಶನಗಳನ್ನು ರೂಪಿಸಲಾಗಿದೆ. ಈ ಪೈಕಿ 190 ನಿವೇಶನಗಳನ್ನು ಪೇಟೆ ಕಾರ್ಯಕರ್ತರಿಗೆ ಹಂಚಲಾಗಿದೆ.

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲಾ.

ಬಳ್ಳಾರಿ ನಗರಸಭೆಗೆ ನೈಸರ್ಗಿಕ ವಿಕೋಪದಡಿ ಅನುದಾನ ಬಿಡುಗಡೆ

545 (500) ಶ್ರೀ ಎಂ. ದಿವಾಕರಬಾಬು (ಬಳ್ಳಾರಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996ನೇ ವರ್ಷದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ ಬಳ್ಳಾರಿಯ ರಸ್ತೆಗಳು ಪೂರ್ಣವಾಗಿ ಹಾನಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಳ್ಳಾರಿ ನಗರಸಭೆಯು ರಸ್ತೆ ದುರಸ್ಥಿ ಕಾರ್ಯವನ್ನು ಕೈಗೆತ್ತಿಕೊಳ್ಳಲು ಪ್ರಕೃತಿ ವಿಕೋಪದ ಅನುದಾನದಡಿಯಲ್ಲಿ ರೂ. 93.00 ಲಕ್ಷಗಳನ್ನು ಕೇಳಿರುವುದೇ?

ಇ) ಹಾಗಿದ್ದಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ಬಳ್ಳಾರಿ ನಗರದಲ್ಲಿ 18.00 ಕಿ.ಮೀ ರಸ್ತೆ ಹಾನಿಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೌದು.

ಇ) ಪ್ರಸಕ್ತ ಸಾಲಿನಲ್ಲಿ ಪ್ರವಾಸ ಪರಿಹಾರ ಕಾರ್ಯಗಳಿಗಾಗಿ ಬಳ್ಳಾರಿ ಜಿಲ್ಲೆಗೆ ರೂ 146.40 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ಬಳಿ ಲಭ್ಯವಿರುವ ಹಣದಲ್ಲಿ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಕೃಷಿ ಮಾರುಕಟ್ಟೆ ಅಭಿವೃದ್ಧಿ ಯೋಜನೆಯಲ್ಲಿ ಬಿಡುಗಡೆಯಾದ ಹಣ

546 (850) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಕೃಷಿ ಮಾರುಕಟ್ಟೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ಅಭಿವೃದ್ಧಿ ಯೋಜನೆಯಲ್ಲಿ ರಾಜ್ಯ ಸರ್ಕಾರವು ಎಷ್ಟು ಅನುದಾನ ಬಿಡುಗಡೆ ಮಾಡಿದೆ;